ಅದಕ್ಕೆ ಅವರು ಹೇಳುತ್ತಾರೆ 25ನೇ ತಾರೀಖು ಈ ಸಮಸ್ಯೆ ಗಂಭೀರ ಇದ್ದ ಕಾರಣ, 25ನೇ ತಾರೀಖು ನಾವು ಏನು ಮಾಡಬೇಕು ಎಂಬ ಪ್ರಶ್ನೆ ಇದ್ದಾಗ ನೀವು ನಿಮ್ಮ ವಕೀಲರಿಗೆ ಹೇಳಿ ಪಾರ್ಟಿ ಎಂದು ಇಂಪ್ಲೀಡ್ ಮಾಡಿ ಪುನಃ ಅದು ಫೈನಲ್ ರಿಪೋರ್ಟ್ ಬಂದಾಗ ಏನು ತೀರ್ಮಾನ ಮಾಡಬೇಕೋ ಮಾಡಿ. ಆದರೆ ಈ ತಕ್ಷಣ 25 ತಾರೀಖಿಗೆ ಸರ್ಕಾರದ ವತಿಯಿಂದ ಏನು ಪ್ರಯತ್ನ ಬೇಕು, ಆ ಪ್ರಯತ್ನ ಮಾಡಿ ನಿಮ್ಮ ವಕೀಲರನ್ನು ಅಲ್ಲಿ ಇಡಿ ಎಂಬ ಮಾತನ್ನು ಅವರು ಕೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಈ ಮೇವಾರ ಜನಾಂಗಕ್ಕೆ ಅನ್ಯಾಯವಾಗುತ್ತಿದೆ, ಇಡೀ ರಾಜ್ಯದಲ್ಲಿ ಮೇವಾರ ಜನಾಂಗದವರಿಗೆ ಊಟ, ವಸತಿ ಇಲ್ಲದಂತಾಗುತ್ತದೆ, ಕೆಲಸ ಇಲ್ಲದಂತಾಗುತ್ತದೆ, ಅದನ್ನು ತಮಗೆ ಹೇಳುತ್ತಿದ್ದೇನಷ್ಟೇ.

(4) ನಿಯಮ 351ರ ಮೇರೆಗೆ

ಅರಕಲಗೂಡು ತಾಲ್ಲೂಕು ರಾಮನಾಥಪುರ ಬಸ್ ಡಿಪೋ ಕಾರ್ಯಗಾರ ಮತ್ತು ಕೋಣಸೂರಿನ ಬಸ್ ನಿಲ್ದಾಣ ಪ್ರಾರಂಭ ಮಾಡುವ ಬಗ್ಗೆ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲ ಗೂಡು): ಮಾನ್ಯ ಉಪಾಧ್ಯಕ್ಷರೆ, ಅರಕಲಗೂಡು ರಾಮನಾಥಪುರದಲ್ಲಿ ನಿರ್ಮಾಣವಾಗಿರುವ ಬಸ್ ಡಿಪೊ ಕಾರ್ಯಗಾರಕ್ಕೆ ಮತ್ತು ಕೋಣನೂರಿನಲ್ಲಿ ನಿರ್ಮಾಣಗೊಂಡಿರುವ ಬಸ್ ನಿಲ್ದಾಣ ಕಟ್ಟಡಕ್ಕೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿದ್ದು ಯಾವಾಗ? ಮತ್ತು ಮೇಲ್ಕಂಡ ಎರಡು ಕೆಲಸಗಳನ್ನು ಎಂದು ಪ್ರಾರಂಭೋತ್ಸವ ಮಾಡಲಾಗುವುದೆಂದು ಸರ್ಕಾರದಿಂದ ತಿಳಿಯಬಯಸುತ್ತೇನೆ.

ಶ್ರೀ ಪಿ.ಬಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ನಿಯಮ 351ರ ಅಡಿಯಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಎ.ಟಿ. ರಾಮಸ್ವಾಮಿಯವರು ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಾರಿಗೆ ಸಚಿವರ ಹೇಳಿಕೆ.

ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿ ನಿರ್ಮಾಣವಾಗಿರುವ ಬಸ್ ಡಿಪೋ ನಿರ್ಮಾಣಕ್ಕಾಗಿ ದಿನಾಂಕ 19-10-1994 ರಂದು 20 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಒಪ್ಪಿಗೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ. ಕೆಲಸವು ಪೂರ್ಣಗೊಂಡಿದ್ದು ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು.

ಅರಕಲಗೂಡು ತಾಲ್ಲೂಕು ಕೋಣನೂರಿನಲ್ಲಿ ನಿರ್ಮಾಣರಾಗಿರುವ ಬಸ್ ನಿಲ್ದಾಣಕ್ಕೆ ದಿನಾಂಕ 17-9-1992 ರಂದು 25.50 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಒಪ್ಪಿಗೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ. ಕೆಲಸವು ಪೂರ್ಣಗೊಂಡಿದ್ದು ಪ್ರಮಾಣೀಕರ ಉಪಯೋಗಕ್ಕೆ ಬಿಟ್ಟುಕೊಡಲಾಗಿದೆ. ಸದ್ಯದಲ್ಲಿಯೇ ಪ್ರಾರಂಭೋತ್ಸವವನ್ನು ಮಾಡಲಾಗುವುದು.